# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.992-2020** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಭುಸ್ವಾಮಿ ಎಸ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 10-02-2025. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಎಸ್ ವಕೀಲರಿಂದಃ**

ಆರೋಪಿ ಖಾಸಗಿ ಕಾರ್ಖಾನೆಯಲ್ಲಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸತ್ತಿರುತ್ತಾರೆ ಎಂದರೆ ಸರಿ. ಆರೋಪಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂಗಿ ಸುನಂದರವರಿಗೆ ಇಬ್ಬರು ಮಕ್ಕಳಿದ್ದು ಆರೋಪಿ ಧರ್ಮೇಶ ಮತ್ತು ಶಾಂತೇಶ ರವರುಗಳಾಗಿರುತ್ತಾರೆ. ಧರ್ಮೇಶ ಸುಮಾರು 8 ವರ್ಷಗಳಿಂದ ರಿಷಿ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ ಎಂದರೆ ಸರಿ. ನನ್ನ ತಂಗಿ ಮಗ ಶಾಂತೇಶ ಏನು ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ನಾನು ಆರೋಪಿ ತಮ್ಮ ಶಾಂತೇಶ ರವರಿಗೆ ಖಾದಿ ಗ್ರಾಮೊದ್ಯೋಗ ಇಲಾಖೆಯಲ್ಲಿ ಕೆಲಸ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂಗಿಯ ಇಬ್ಬರು ಗಂಡು ಮಕ್ಕಳಿಗೂ ಮದುವೆ ಆಗಿರುವುದಿಲ್ಲ ಎಂದರೆ ಸರಿ. ಆರೋಪಿ ಮತ್ತು ಆತನ

ತಮ್ಮನಿಗೆ ಬರುವ ಆದಾಯ ಆತನ ಕುಟುಂಬದ ನಿರ್ವಹಣೆಗೆ ಸಾಕಾಗುತ್ತದೆ ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಆಸ್ತಿಯಿಂದ ಬಂದಂತಹ ಆದಾಯವನ್ನು ನಾನು ಮತ್ತು ನನ್ನ ಸಹೋದರ ಪಡೆದುಕೊಳ್ಳುತ್ತಿದ್ದುದ್ದರಿಂದ ಆರೋಪಿ ಮತ್ತು ಆತನ ತಮ್ಮನಿಗೆ ಬಂದಂತಹ ಆದಾಯದಿಂದ ಆರೋಪಿ ಅವರ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ.

2.ಆರೋಪಿ ಮತ್ತು ಅವರ ಕುಟುಂಬದವರು ವಾಸವಿರುವ ಮನೆ ಸರ್ಕಾರದಿಂದ ಮಂಜೂರಾಗಿರುವ ಸ್ವತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು ಅದಕ್ಕೆ ನಾನು ಸಹ ಸಹಾಯ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿ ಕುಟುಂಬದವರಿಗೆ ಮನೆ ಕಟ್ಟಲು ಹಣ ಸಹಾಯ ಮಾಡಿದ್ದೇನೆ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ. ಆರೋಪಿ ಕುಟುಂಬದವರಿಗೆ ಆಶ್ರಯ ಯೋಜನೆ ಅಡಿಯಲ್ಲಿ ಯಾವ ವರ್ಷ ನಿವೇಶನ ಮಂಜೂರು ಆಯಿತು ಎಂದು ಗೊತ್ತಿಲ್ಲ. ಆದರೆ ನಿವೇಶನ ಮಂಜೂರು ಆದ ವಿಚಾರ ಮಾತ್ರ ಗೊತ್ತು. ಆರೋಪಿ ಮತ್ತು ಅವರ ಕುಟುಂಬದವರು ವಾಸವಿರುವ ಮನೆ ಶೀಟು ಮತ್ತು ಹಂಚಿನಿಂದ ಕೂಡಿರುತ್ತದೆ. ಆರೋಪಿ ವಾಸವಿರುವ ಮನೆಗೆ ಇನ್ನೂ ಸಹ ನೆಲಕ್ಕೆ ಸಿಮೆಂಟ್ ಹಾಕಿರುವುದಿಲ್ಲ ಅದನ್ನು ಈಗಲೂ ಸಹ ಸಗಣಿಯಿಂದ ತಾರಿಸಲಾಗುತ್ತಿರುತ್ತದೆ ಎಂದರೆ ಸರಿ.

3.ಈಗಲೂ ಸಹ ಆರೋಪಿ ಮತ್ತು ಅವರ ಕುಟುಂಬದವರು ಬಡತನ ರೇಖೆಯಲ್ಲಿಯೇ ಜೀವನ ಮಾಡುತ್ತಿರುವುದರಿಂದ 2020 ರಲ್ಲಿ ಮನೆ ನಿರ್ಮಾಣ ಮಾಡುವ ಉದ್ದೇಶದಿಂದ ಯವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿಗೆ ಹಣವನ್ನು ನೀಡಿದ್ದ ಪಕ್ಷದಲ್ಲಿ ನಾನು ನನ್ನ ಪಿರ್ಯಾದಿನಲ್ಲಿ ಸಮಂಜಸವಾದ ಕಾರಣವನ್ನು ನೀಡುತ್ತಿದ್ದು, ನಾನು ಅರೋಪಿಗೆ ಯಾವುದೇ ಹಣವನ್ನು ನೀಡದೇ ಇರುವುದರಿಂದ ಮನೆ ನಿರ್ಮಾಣ ಮಾಡಲು ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 2020 ರಲ್ಲಿ ಭೇಟಿಯಾಗಿರುವುದಿಲ್ಲ ಹಾಗೂ ನನ್ನಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

4.ನಿಪಿ–1 ರಲ್ಲಿ ಸಹಿಯನ್ನು ಹೊರತು ಪಡಿಸಿ ಉಳಿದ ಒಕ್ಕಣೆಯಲ್ಲಿ ಇರುವ ಕೈಬರಹವು ನನ್ನದಾಗಿರುತ್ತದೆ ಎಂದರೆ ಸರಿ. ನಾನು 2016 ರಲ್ಲಿ ಐಸಿಐಸಿಐ ಬ್ಯಾಂಕ್ ನಿಂದ ಸಾಲವನ್ನು ಪಡೆದಾಗ ಆರೋಪಿಯು ಸದರಿ ಸಾಲಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದರು ಎಂದರೆ ಸರಿ. ಆ ರೀತಿ ಸಹಿ ಮಾಡುವ ಸಂದರ್ಭದಲ್ಲಿ ಬ್ಯಾಂಕಿಗೆ ನೀಡುವ ಸಲುವಾಗಿ ಚೆಕ್ ಅವಶ್ಯಕತೆ ಇದೆ ಎಂದು ನಾನು ಆರೋಪಿಗೆ ಸೇರಿದ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದು ಸದರಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು 2020 ರಲ್ಲಿ ಆರೋಪಿಯ ವಿರುದ್ದ ಈ ಸುಳ್ಳು

ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿರುವ ಸಹಿಯು 2016 ನೇ ಇಸವಿಯಲ್ಲಿ ಮಾಡಿದ್ದಾಗಿದ್ದು, 2020 ನೇ ಇಸವಿಯಲ್ಲಿ ಮಾಡಿದ್ದಲ್ಲವಾಗಿರುವುದರಿಂದ ನೈಜತೆಯನ್ನು ತಿಳಿದುಕೊಳ್ಳಲು ಅದನ್ನು ತಜ್ಞರ ಪರೀಕ್ಷೆಗೆ ಕಳುಹಿಸಲು ನಿಮಗೆ ತೊಂದರೆ ಇರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

5.ನಾನು ನಿಪಿ–1 ನ್ನು 2 ಬಾರಿ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ನಾನು ದಿಃ 05.11.2020 ರಂದು ಇಂಡಿಯನ್ ಬ್ಯಾಂಕಿಗೆ ಚೆಕ್ಕನ್ನು ಹಾಜರುಪಡಿಸಿದ್ದು, ಅದು ವಾಪಸ್ಸು ಬಂದ ನಂತರ ನೋಟಿಸನ್ನು ನೀಡಿಸಿರುತ್ತೇನೆ. ಸದರಿ ನೋಟಿಸಿನ ಪ್ರತಿಯನ್ನು ನಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಹಿಂಬರಹವನ್ನು ದಿಃ09.11.2020 ರಂದು ನೀಡಿದ್ದು ಅದಾದ 2 ದಿನದ ನಂತರ ನಾನು ನೋಟಿಸು ನೀಡಿರುತ್ತೇನೆ. ನಿಪಿ–2 ರಲ್ಲಿರುವ ಒಕ್ಕಣೆಯನ್ನು ಬ್ಯಾಂಕಿನವರೆ ನೀಡಿರುತ್ತಾರೆ. ದಿಃ09.11.2020 ರಂದು ಚೆಕ್ಕನ್ನು ಎರಡನೇ ಬಾರಿಗೆ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ನಿಪಿ–2 ರಲ್ಲಿರುವ ಮಾಹಿತಿಯು ಅಪೂರ್ಣವಾಗಿರುತ್ತದೆ ಎಂದರೆ ಇರಬಹುದು. ಬ್ಯಾಂಕಿನವರು ನನಗೆ ಸಮರ್ಪಕವಾದ ಹಿಂಬರಹವನ್ನು ನೀಡದೇ ಇದ್ದರು ಸಹ ಈ ಪ್ರಕರಣವನ್ನು ದಾಖಲಿಸುವ ಉದ್ದೇಶದಿಂದ ನಿಪಿ–2 ರ

ಹಿಂಭಾಗದಲ್ಲಿ ನಮೂದು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೋಟಿಸನ್ನು ನೀಡಿದ ನಂತರ ಆರೋಪಿ ನನ್ನನ್ನು ಭೇಟಿಯಾಗಿ ಸಾಲ ನೀಡದೇ ಇದ್ದರು ಏಕೆ ನನಗೆ ನೋಟಿಸು ನೀಡಿದ್ದಿರಿ ಎಂದು ಪ್ರಶ್ನಿಸಿದ್ದು, ಆ ಸಮಯ ನಾನು ಆರೋಪಿ ತಾಯಿ ವಿಭಾಗಕ್ಕಾಗಿ ಸಲ್ಲಿಸಿರುವ ದಾವೆಯನ್ನು ಹಿಂಪಡೆಯುವಂತೆ ತಿಳಿಸಿದ್ದರಿಂದ ಆರೋಪಿ ಗ್ರಾಮದಲ್ಲಿ ರಾಜಿ ಪಂಚಾಯ್ತಿ ಮಾಡಿಸಿದ್ದರಿಂದ ನೋಟಿಸಿಗೆ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಆರೋಪಿಯ ಮತ್ತೇರಡೂ ಚೆಕ್ಕುಗಳು ನನ್ನ ಬಳಿ ಇದ್ದು, ಅವುಗಳನ್ನು ಉಪಯೋಗಿಸಿಕೊಂಡು ಪುನಃ ಪ್ರಕರಣವನ್ನು ದಾಖಲಿಸುತ್ತೇನೆ ಎಂದು ಊರಿನಲ್ಲಿ ಪ್ರಚಾರ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ.

6. ಆರೋಪಿಯ ತಾಯಿಯವರ ಭಾಗದ ಆಸ್ತಿಯನ್ನು ನಾನು ಮತ್ತು ನನ್ನ ಸಹೋದರ ಕಬಳಿಸುವ ಉದ್ದೇಶದಿಂದ ಹಾಗೂ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಈಗಲೂ ಸಹ ಈ ಪ್ರಕರಣವನ್ನು ಮುಂದುವರೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಸಾಲವನ್ನು ಪಡೆದುಕೊಂಡು ಯಾವುದೇ ಚೆಕ್ಕನ್ನು ನೀಡದೆ ಇರುವುದರಿಂದ ಈ ಪಿರ್ಯಾದಿನಲ್ಲಿ ನಮೂದಿಸಿರುವ ಸಾಲವನ್ನು ಮರುಪಾವತಿ ಮಾಡಲು ಆರೋಪಿ ಭಾಧ್ಯಸ್ತನಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**